ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ–1

**ದಿಃ 15.10.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 2 ನೇ ಪ್ರತಿವಾದಿಪರ ಶ್ರೀ ಟಿ ಆರ್ ಎಸ್ ವಕೀಲರಿಂದಃ –**

ಮೃತ ಮಹಾದೇವಮ್ಮನವರ ಆಧಾರ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿಯು ಆಧಾರ ಕಾರ್ಡ ಇಲ್ಲಾ ಚುನಾವಣಾ ಗುರುತಿನ ಚೀಟಿ ಇದೆ ಎನ್ನುತ್ತಾರೆ. ಆ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಲು ನಿಮಗೇನಾದರು ತೊಂದರೆ ಇದೆಯಾ ಎಂದರೆ ಸದರಿ ಗುರುತಿನ ಚೀಟಿ ನನ್ನ ಬಳಿ ಇದೆಯಾ ಇಲ್ಲವೋ ಎನ್ನುತ್ತಾರೆ. ಸದರಿ ಮಹಾದೇವಮ್ಮನವರು ರೇಶನ್ ಕಾರ್ಡ ಮಾಡಿಸಿದ್ರಾ ಎಂದರೆ ಇಲ್ಲಾ. ವಿಧವಾ ವೇತನ ಪಿಂಚಣಿ ಮಾಡಿಸಿಕೊಂಡಿದ್ದರು. ಆ ವಿಧವಾ ವೇತನದ ಕಾರ್ಡ ನಿಮ್ಮ ಬಳಿ ಇದೆಯಾ ಎಂದರೆ ಇಲ್ಲ. ಸದರಿ ದಾಖಲೆಗಳನ್ನು ಏನು ಮಾಡಿದ್ರಿ ಎಂದರೆ ಮಾಹರದೇವಮ್ಮನವರ ಬಳಿ ಇತ್ತು ಅವರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ನೀವೇನಾದರು ಮಹಾದೇವಮ್ಮನವರ ಚುನಾವಣ ಗುರುತಿನ ಚೀಟಿ ಆಗಲಿ ಅಥವಾ ವಿಧವಾ ವೇತನದ ಕಾರ್ಡ ನೋಡ್ರಾ ಎಂದರೆ ನೋಡಿದ್ದೇನೆ ಎನ್ನುತ್ತಾರೆ. ಆ ದಾಖಲೆಗಳು ಎಲ್ಲವೂ ಕೂಡ ಕಿತ್ತೂರು ವಿಳಾಸಕ್ಕೆ ಸಂಬಂಧಪಟ್ಟ ದಾಖಲೆಗಳು ಎಂದರೆ ಸರಿ. ಸದರಿ ಮಹಾದೇವಮ್ಮನವರ ಹರಪನಹಳ್ಳಿ ತಾಲೂಕು ಹಗರಿಗುಡಿಹಳ್ಳಿ ಗ್ರಾಮಕ್ಕೆ ಸಂಬಂಧ ಪಟ್ಟಿರುವಂತಹ ದಾಖಲಾತಿಗಳು ಇರಲಿಲ್ಲ ಎಂದರೆ ಸರಿ. ಸದರಿ ಮಹಾದೇವಮ್ಮನವರ ಎಲ್ಲಾ ದಾಖಲೆಗಳು ಕಿತ್ತೂರು ಗ್ರಾಮದ ವಿಳಾಸಕ್ಕೆ ಸಂಬಂಧಪಟ್ಟ ದಾಖಲೆಗಳು ಆಗಿದ್ದವು ಎಂದರೆ ಸರಿ. ಮೃತ ಮಹಾದೇವಮ್ಮ ನವರನ್ನು ಈಶ್ವರಪ್ಪ ಮದುವೆ ಆದ ನಂತರ ಕಿತ್ತೂರು ಗ್ರಾಮಕ್ಕೆ ಕಾರ್ಯಕ್ಕೆ ಬಂದಾಗ ಅಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಬಳಿ ಈಶ್ವರಪ್ಪ ಎಲ್ಲಿ ಮೃತಪಟ್ಟರು ಎನ್ನುವ ಬಗ್ಗೆ ದಾಖಲೆಗಳು ಇದೆಯಾ ಎಂದರೆ ಗೊತ್ತಿಲ್ಲಾ. ಮಹಾದೇವಮ್ಮ ಎಂದೂಕೂಡ ಹಗರಿಗುಡಿಹಳ್ಳಿ ಗ್ರಾಮಕ್ಕೆ ಹೋಗಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಹಗರಿಗುಡಿಹಳ್ಳಿ ಗ್ರಾಮಕ್ಕೆ ಮಹಾದೇವಮ್ಮ ಹೋಗಿ

ವಾಸವಾಗಿದ್ದರು ಎಂದು ಹೇಳಲಿಕ್ಕೆ ನಿಮ್ಮ ಬಳಿ ಏನು ದಾಖಲೆ ಇದೆ ಎಂದರೆ ಇಲ್ಲಾ. ನೀವು ಕಳೆದ ಬಾರಿ ಸಾಕ್ಷ್ಯ ವಿಚಾರಣೆ ಕೊಡುವ ಸಂಧರ್ಭದಲ್ಲಿ ಮಹಾದೇವಮ್ಮ ಕಿತ್ತೂರು ಗ್ರಾಮದ ನಮ್ಮ ಮನೆಯ ಪಕ್ಕದಲ್ಲಿ ಇರುವ ಮನೆಯಲ್ಲಿ ವಾಸವಾಗಿದ್ದರು ಎಂದು ಹೇಳಿದ್ರಿ ಆಮನೆಯ ಡೋರ್ ನಂಬರ ಹೇಳಲು ಆಗುತ್ತದೆಯಾ ಎಂದರೆ ಹಳ್ಳಿಗಳಲ್ಲಿ ಡೋರ್ ನಂಬರ ಇರುವುದಿಲ್ಲ ಎನ್ನುತ್ತಾರೆ. ನಿಮ್ಮ ಮನೆಯ ಡೋರ್ ನಂಬರ ಇಲ್ಲ ಎಂದರೆ ಸರಿ. ಕಿತ್ತೂರು ಗ್ರಾಮ ಯಾವ ಗ್ರಾಮ ಪಂಚಾಯತಿಗೆ ಒಳಪಡುತ್ತದೆ ಎಂದರೆ ಹೆಮ್ಮನಬೇತೂರು ಗ್ರಾಮ ಪಂಚಾಯಗೆ ಬರುತ್ತದೆ. ಹೆಮ್ಮನಬೇತೂರು ಗ್ರಾಮ ಪಂಚಾಯತಿಗೆ ಬರುವ ಎಲ್ಲಾ ಮನೆಗಳಿಗೆ ಗ್ರಾಮ ಪಂಚಾಯತಿಯವರು ಪ್ರಸ್ತುತ ಡೋರ್ ನಂಬರ ಮತ್ತು ಇ ಸ್ವತ್ತು ಕೊಡುತ್ತಿದ್ದಾರೆ ಎಂದರೆ ಸರಿ. ನೀವು ವಾಸ ಮಾಡುತ್ತಿರುವ ಮನೆ ಯಾರ ಹೆಸರಿನಲ್ಲಿ ಇದೆ ಎಂದರೆ ನನ್ನ ಹೆಸರಿಗೆ ಇದೆ ಎನ್ನುತ್ತಾರೆ. ನಾನು ವಾಸವಾಗಿರುವ ಮನೆಯ ಡೋರ್ ನಂಬರ 34 ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಇತ್ತೀಚೆಗೆ ಡೋರ್ ನಂಬರ ಕೊಟ್ಟಿರುತ್ತಾರೆ. ಎಷ್ಟನೇ ಇಸ್ವಿಯಲ್ಲಿ ಸದರಿ ಡೋರ್ ನಂಬರ ಕೊಟ್ಟಿರುತ್ತಾರೆಂದರೆ 2018-19 ನೇ ಇಸ್ವಿಯಲ್ಲಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಮಹಾದೇವಮ್ಮ ನಿಮ್ಮ ಗಂಡನಿಗೆ ಅತ್ತೆ ಆಗಬೇಕು ಎಂದರೆ ಸರಿ. ನಿಮ್ಮ ಮಗ ಮಹಾದೇವಮ್ಮನಿಗೆ ಅಳಿಯನಾಗಬೇಕು ಎಂದರೆ ಸರಿ. ದತ್ತು ತೆಗೆದುಕೊಳ್ಳುವ ಸಂಧರ್ಭದಲ್ಲಿ ದತ್ತು ತೆಗೆದುಕೊಳ್ಳುವವರಿಗೆ ದತ್ತು ತೆಗೆದುಕೊಳ್ಳುವ ಮಗ, ಮೊಮ್ಮಗನ ಸಂಬಂಧ ಇರಬೇಕು ಎಂದರೆ ಸಾಕ್ಷಿ ಯಾರನ್ನು ಬೇಕಾದರು ದತ್ತು ತೆಗೆದುಕೊಳ್ಳಬಹುದು ಎನ್ನುತ್ತಾರೆ. ಸಾಮಾನ್ಯವಾಗಿ ಸಂಬಂಧದಲ್ಲಿ ಅಳಿಯ ಆಗಬೇಕಾದ ವ್ಯಕ್ತಿಯನ್ನು ದತ್ತು ತೆಗೆದುಕೊಳ್ಳುವುದಿಲ್ಲಾ ಎಂದರೆ ಸರಿಯಲ್ಲ. ಪ್ರತಿಸಲ ನೀವು ಈ ಕೇಸಿಗೆ ಬರುವಾಗ ನಿಮ್ಮ ವಕೀಲರ ಜೊತೆ ಅವರ ಕಾರಿನಲ್ಲಿ ಬರುತ್ತೀರಾ ಎಂದರೆ ಸರಿಯಲ್ಲ. ನಿಮಗೆ ಒಬ್ಬ ಮಗ ಇಬರು ಹೆಣ್ಣುಮಕ್ಕಳು ಎಂದರೆ ಸರಿ. ನನಗೆ ಮೊದಲು ಹೆಣ್ಣುಮಕ್ಕಳು ಅವರ ಹೆಸರು ಪವಿತ್ರ, ಮೈತ್ರಾ, ನಂತರ ಮಗ ಅವನ ಹೆಸರು ಶ್ರೀಕಾಂತ್ ಎನ್ನುತ್ತಾರೆ. 2 ನೇ ಮಗಳ ಮದುವೆ ಆಗಿದೆ ಮಗನ ಮದುವೆ

ಆಗಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಈಗ ತೆರೆದ ನ್ಯಾಯಾಲಯದಲ್ಲಿ ಒಂದು ದಿನ ಪತ್ರಿಕೆಯನ್ನು ತೋರಿಸಿ ಈ ಪತ್ರಿಕೆಯಲ್ಲಿ ಇರುವ ಭಾವ ಚಿತ್ರ ನಿಮ್ಮ ಮಗಳು ಪವಿತ್ರಾ ರವರದ್ದು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಜನತಾವಾಣಿ ಪತ್ರಿಕೆಯನ್ನು ನಿ ಡಿ 10 ಎಂದು ಗುರುತಿಸಲಾಯಿತು. ನನ್ನ ಮಗಳು ಪವಿತ್ರಾ ದಾವಣಗೆರೆಯ ಜಿ ಎಂ ಐ ಟಿ ಇಂಜಿನೀಯರಿಂಗ್ ಕಾಲೇಜ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಜಿ ಎಂ ಐ ಟಿ ಕ್ವಾಟ್ರರ್ಸ ನಲ್ಲಿ ವಾಸವಾಗಿದ್ದಾರೆ ಎನ್ನುತ್ತಾರೆ. ದತ್ತು ಸ್ವೀಕಾರ ಪತ್ರ ನಿ ಪಿ 23 ಬರೆಸಲು ಯಾರು ಮಾಹಿತಿ ಕೊಟ್ಟರು ಎಂದರೆ ಮಹಾದೇವಮ್ಮ ಮತ್ತು ನಾವು ಸೇರಿ ಕೊಟ್ಟಿರುತ್ತೇವೆ ಎನ್ನುತ್ತಾರೆ. ಮಹಾದೇವಮ್ಮ ಅನಕ್ಷರಸ್ಥೆ ಮತ್ತು ಅವಿದ್ಯಾವಂತೆ ಎಂದರೆ ಸರಿ. ದತ್ತು ಪತ್ರವನ್ನು ತಯಾರು ಮಾಡಲು ನೀವು ಯಾರನ್ನು ಸಂಪರ್ಕ ಮಾಡಿದ್ರಿ ಎಂದರೆ ಕೊಟ್ರೇಶ್ ವಕೀಲರನ್ನು ಸಂಪರ್ಕ ಮಾಡಿದ್ದೆವು. ಕೊಟ್ರೇಶ್ ವಕೀಲರು ದಾವಣರೆಗೆ ಊರಿನವರು ಎನ್ನುತ್ತಾರೆ. ಅವರು ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಅವರು ಮೊದಲು ಪರಿಚಯ ಇರಲಿಲ್ಲ ಸಬ್ ರಜಿಸ್ಟರ್ ಕಚೇರಿಯಲ್ಲಿ ಪರಿಚಯ ಆಗಿರುತ್ತಾರೆ. ಕೊಟ್ರೇಶ್ ರವರು ನಿಮ್ಮ ವಕೀಲರ ಸ್ನೇಹಿತರು ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ನಿ ಪಿ 23 ನ್ನು ಯಾರು ಟೈಪ್ ಮಾಡಿದರು ಎಂದರೆ ನೆನಪಿಲ್ಲಾ ಎನ್ನುತ್ತಾರೆ. ಸಾಮಾನ್ಯವಾಗಿ ಒಬ್ಬನೇ ಇರುವಂತಹ ವ್ಯಕ್ತಿಗಳು ಯಾರಿಗೂ ದತ್ತುಗೆ ಕೊಡುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 10.08.2005 ನೇ ಇಸ್ವಿಯಲ್ಲಿ 1923 ನೇ ಪಾರ್ಥಿವ ನಾಮ ಸಂವತ್ಸರ ಶ್ರಾವಣ ಶುದ್ಧ ಬೆಳಿಗ್ಗೆ 8.44 ನಿಮಿಷದಿಂದ 10.45 ನಿಮಿಷದ ವರೆಗೆ ಸಲ್ಲುವ ಕನ್ಯಾ ಲಗ್ನದಲ್ಲಿ ದತ್ತು ಸ್ವೀಕಾರಕ್ಕೆ ಯೋಗ್ಯವಾದ ಮುಹೂರ್ತ ಅಲ್ಲ ಎಂದರೆ ಸರಿಯಲ್ಲ. ನಿ ಪಿ 23 ರಲ್ಲಿ ತೋರಿಸಿದ ದಿನಾಂಕ ಸಮಯದಲ್ಲಿ ಯಾವುದೇ ದತ್ತು ಸ್ವೀಕಾರ ನಡೆದಿಲ್ಲಾ ಎಂದರೆ ಸರಿಯಲ್ಲ. ನೀವು ನಿ ಪಿ 23 ರಲ್ಲಿ ಹೇಳಿದ ದಿನಾಂಕ ಸಮಯ ದತ್ತು ಸ್ವೀಕಾರ ನಡೆದಿದೆ ಎಂದು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಮಹಾದೇವಮ್ಮ ಕನ್ನಡಕವನ್ನು ಧರಿಸುತ್ತಿದ್ದರು ಎಂದರೆ ಸರಿ. ಮಹಾದೇವಮ್ಮನಿಗೆ

ಸಹಿ ಮಾಡಲು ಬರುತ್ತಿರಲಿಲ್ಲ ಹೆಬ್ಬೆಟ್ಟಿನ ಗುರುತು ಮಾತ್ರ ಹಾಕುತ್ತಿದ್ದರು ಎಂದರೆ ಸರಿ. ನಿ ಪಿ 23 ರಲ್ಲಿ ಸಾಕ್ಷಿಗೆ ಈಗ ತೆರೆದ ನ್ಯಾಯಾಲಯದಲ್ಲಿ ತೋರಿಸಿದ ಅದರಲ್ಲಿ ಇರುವ ಮಹಾದೇವಮ್ಮ ನವರ ಫೋಟೋದಲ್ಲಿ ಮಹಾದೇವಮ್ಮ ಕನ್ನಡಕ ಧರಿಸಿರುವುದುವು ಕಂಡು ಬರುವುದಿಲ್ಲ ಎಂದರೆ ಸರಿ. ನಿಮ್ಮ ಮಗ ಶ್ರೀಕಾಂತನ ಆಧಾರ ಕಾರ್ಡ ಇದೆಯಾ ಎಂದರೆ ಇದೆ. ಅದನ್ನು ಹಾಜರುಪಡಿಸಲು ನಿಮಗೇನಾದರು ತೊಂದರೆ ಇದೆಯಾ ಎಂದರೆ ಇಲ್ಲಾ. ನೀವು ಹೇಳುವಂತಹ ದತ್ತು ಸ್ವೀಕಾರ ಆದ ನಂತರೂ ಕೂಡ ನಿಮ್ಮ ಮಗ ನಿಮ್ಮ ಜೊತೆ ಇದ್ದನು ಎಂದರೆ ಸರಿಯಲ್ಲ. ನಿಮ್ಮ ಮಗನಾಗಿ ಇದ್ದಾಗ ಇದ್ದ ವಿಳಾಸದ ಬಗ್ಗೆ ಹಾಗೂ ದತ್ತು ಸ್ವೀಕಾರ ಆಗಿದೆ ಎಂದು ಹೇಳಿದ ನಂತರ ಇದ್ದ ವಿಳಾಸದ ದಾಖಲಾತಿಗಳು ನಿಮ್ಮ ಬಳಿ ಇವೆಯಾ ಎಂದರೆ ಇದೆ ಎನ್ನುತ್ತಾರೆ. ಆ ದಾಖಲಾತಿಗಳನ್ನು ಹಾಜರುಪಡಿಸಲು ನಿಮಗೇನಾದರು ತೊಂದರೆ ಇದೆಯಾ ಎಂದರೆ ಇಲ್ಲಾ. ನೀವು ಈ ದತ್ತು ಪತ್ರವನ್ನು ಹಾಜರುಪಡಿಸಿದ್ದೀರಲ್ಲಾ ಆ ದತ್ತು ಪತ್ರದಲ್ಲಿ ಇರುವ ಸಾಕ್ಷಿದಾರರಾದ ಟಿ ಬಸವರಾಜಪ್ಪ ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿ ಚಿಕ್ಕಪ್ಪ ಆಗಬೇಕು ಎನ್ನುತ್ತಾರೆ. ಅಂದರೆ ನನ್ನ ತಾಯಿಯ ತಂಗಿಯ ಗಂಡ ಎನ್ನುತ್ತಾರೆ. ಈಗ ನಿಮ್ಮ ಮಗ ಶ್ರಿಕಾಂತ ಏನು ಓಪದಿರುತ್ತಾನೆ ಎಂದರೆ ಐ ಟಿ ಐ ಓದಿರುತ್ತಾನೆ ಎನ್ನುತ್ತಾರೆ. ದಾವಣಗೆರೆಯ ಸರ್ಕಾರಿ ಕಾಲೇಜಿನಲ್ಲಿ ಐ ಟಿ ಐ ಮಾಡಿರುತ್ತಾನೆ ಎನ್ನುತ್ತಾರೆ. ಎಷ್ಟನೇ ವರ್ಷದಲ್ಲಿ ಐ ಟಿ ಐ ಮುಗಿದಿದೆ ಎಂದರೆ 2016-17 ನೇ ಇಸ್ವಿಯಲ್ಲಿ ಐ ಟಿ ಐ ಸಂಪೂರ್ಣ ಗೊಳಿಸಿದ್ದಾನೆ. ಅವನು ಐ ಟಿ ಐ ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಕಾಲೇಜಿನ ದಾಖಲಾತಿಗಳು ಮತ್ತು ವರ್ಗಾವಣೆ ಪ್ರಮಾಣ ಪತ್ರ ಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಇಲ್ಲಾ ನನ್ನ ಮಗ ಶ್ರಿಕಾಂತ ಈಗ ವಯಸ್ಕನಾಗಿದ್ದಾನೆ ಎಂದರೆ ಸರಿ. ಅವನನ್ನು ಈ ಕೇಸಿನಲ್ಲಿ ಸಾಕ್ಷ್ಯ ಮಾಡಿಸಲು ತೊಂದರೆ ಇದೆಯಾ ಎಂದರೆ ಇಲ್ಲಾ. ಮಹಾದೇವಮ್ಮ ಕಿತ್ತೂರಿನಲ್ಲಿ ಮೃತ ಹೊಂದಿರುತ್ತಾರೆ. ವಯಸ್ಸು ಆದ ಮೇಲೆ ಮಹಾದೇವಮ್ಮನವರು ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ದತ್ತಕ ಪತ್ರ ಮಾಡಿದ್ರು

ಎಂದು ಹೇಳುತ್ತೀರಲ್ಲಾ ಆ ಸಮಯ ಮಹಾದೇವಮ್ಮ ನವರ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ದತ್ತಕ ಪತ್ರ ಮಾಡಿದ್ದೇವು ಎಂದು ಹೇಳುತ್ತೀರಲ್ಲಾ ಅವರಿಗೆ ಎಷ್ಟು ವಯಸ್ಸು ಆಗಿತ್ತು ಎಂದರೆ 75-80 ವರ್ಷ ಆಗಿತ್ತು ಎನ್ನುತ್ತಾರೆ. ಮಹಾದೇವಮ್ಮ ಅವರ ಜೀವನದಲ್ಲಿ ಮದುವೆ ಎನ್ನುವುದು ಕೇವಲ ಹೆಸರಿಗಷ್ಟೆ ಆಗಿದ್ದು ಎಂದರೆ ಗೊತ್ತಿಲ್ಲಾ. ಮಹಾದೇವಮ್ಮ ಮದುವೆ ಆಗಿ 15 ದಿನ ನಂತರ ವಿಧವೆ ಆಗಿ ಸಾಯುವವರೆಗೆ ವಿಧವೆ ಆಗಿ ಮೃತ ಹೊಂದಿರುತ್ತಾರೆ ಎಂದರೆ ಗೊತ್ತಿಲ್ಲಾ ಎನ್ನುತ್ತಾರೆ. ಮಹಾದೇವಮ್ಮ ಗಂಡನ ಸಾವು ಮಹಾದೇವಮ್ಮನಿಗೆ ತುಂಬಾ ಅಘಾತ ಉಂಟು ಮಾಡಿತ್ತು ಎಂದರೆ ಸರಿಯಲ್ಲ. ಆ ಅಘಾತದಿಂದ ಅವರು ತನ್ನ ತವರು ಮನೆಯಲ್ಲಿ ಮಾನಸಿಕ ಅಸ್ವಸ್ಥೆ ಅಗಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಮಹಾದೇವಮ್ಮ ಮೃತ ಹೊಂದಿದ ನಂತರ ಅವರ ಆಸ್ತಿ ಅವರ ಗಂಡನ ಮನೆಗೆ ವಾಪಾಸ್ಸು ಹೋಗುತ್ತಿತ್ತು ಆದರೆ ನೀವುಗಳು ಮಹಾದೇವಮ್ಮನ ಗಂಡನ ಮನೆಯ ಆಸ್ತಿಗಳನ್ನು ಲಪಟಾಯಿಸಬೇಕೆನ್ನುವ ಉದ್ದೇಶದಿಂದ ದತ್ತು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಮಹಾದೇವಮ್ಮ ಮೃತ ಪಟ್ಟಾಗ ಶ್ರಿಕಾಂತನ ವಯಸ್ಸು ಎಷ್ಟು ಆಗಿತ್ತು ಎಂದರೆ 12 ವರ್ಷ ಆಗಿತ್ತು ಎನ್ನುತ್ತಾರೆ. 1ನೇ ಪಾರ್ಟಿಯವರ ವಂಶವೃದ್ದಿಗೆ ಮತ್ತು ಇವರನ್ನು ಹಾಗೂ ಇವರ ಕುಟುಂಬವನ್ನು ನೋಡಿಕೊಳ್ಳಲು ಒಬ್ಬ ವಾರಸುದಾರನ ಅವಶ್ಯಕತೆ ಇದ್ದು ಎಂದು ನಿ ಪಿ 23 ರಲ್ಲಿ ಬರೆಸಿದ್ದೀರಾ ಎಂದರೆ ಸರಿ. ಸದರಿ ಶ್ರೀಕಾಂತ ಮಹಾದೇವಮ್ಮ ಬುದುಕಿದ್ದ ಕಾಲದಲ್ಲಿ ಅಪ್ರಾಪ್ತನಿದ್ದ ಕಾರಣ ಎಂದೂ ಕೂಡ ಮಹಾದೇವಮ್ಮನನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸರಿ. ದತ್ತಕ ಮಾಡಿದ್ದಾರೆಂದು ಹೇಳುತ್ತೀರಲ್ಲಾ ಆ ಸಂಧರ್ಭದಲ್ಲಿ ಹರಿಹರದಲ್ಲಿ ದಾಖಲಿಸಿದ ಅಸಲು ದಾವೆ 31/2005 ಮತ್ತು ಅದು ಹರಪನಹಳ್ಳಿ ಗೆ ನ್ಯಾಯಾಲಯಕ್ಕೆ ವರ್ಗಾವಣೆ ಗೊಂಡಾಗ ಅದು 12/2009 ಆಗಿದ್ದು ಸದರಿ ದತ್ತು ಪತ್ರವನ್ನು ಸದರಿ ದಾವೆಗಳಲ್ಲಿ ಎಲ್ಲಿಯೂ ಕೂಡ ಮಹಾದೇವಮ್ಮ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ದತ್ತಕ ಪತ್ರ ಯಾರ ಬಳಿ ಇತ್ತು ಎಂದರೆ ಮಹಾದೇವಮ್ಮನವರ ಬಳಿ

ಇತ್ತು ಎನ್ನುತ್ತಾರೆ. ಸದರಿ ದತ್ತಕ ಪತ್ರವನ್ನು ನಿಮಗೆ ಯಾರು ಕೊಟ್ರು ಎಂದರೆ ಮಹಾದೇವಮ್ಮ ನವರು ವಕೀಲರ ಕೈಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಮಹಾದೇವಮ್ಮ ನವರು ಎಂದೂ ಕೂಡ ನ್ಯಾಯಾಲಯಕ್ಕೆ ದತ್ತಕ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ

**(ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.